ನನ್ನ ದೃಷ್ಟಿಯಲ್ಲಿ ವ್ಯಂಗ್ಯಚಿತ್ರಕಾರನಾದವನು ತನ್ನ ಚಿತ್ರಗಳಲ್ಲಿ ರಾಜಕೀಯ ಅಥವಾ ಸಾಮಾಜಿಕ ಸುಧಾರಣೆಗಳನ್ನು ಸೂಚಿಸಲೇಬಾರದು. ಹಾಗೇನಾದರೂ ಸೂಚಿಸಿದರೆ ವ್ಯಂಗ್ಯ ಚಿತ್ರದೊಳಗೆ ಗಾಂಭೀರ್ಯದ ಒಂದು ಎಳೆ ಸೇರಿಕೊಂಡುಬಿಡುತ್ತದೆ. ವ್ಯಂಗ್ಯಚಿತ್ರದಂಥ ದೃಶ್ಯ ಮಾಧ್ಯಮದಲ್ಲಿ ವ್ಯಂಗ್ಯಚಿತ್ರಕಾರ ತನ್ನ ದೃಷ್ಟಿಕೋನವನ್ನು ಚರ್ಚಿಸಲು ಅವಕಾಶವಿಲ್ಲ. ಅವನು ತೀವ್ರ ವಿಡಂಬನೆಯ ಮಾಧ್ಯಮವನ್ನು ಉಪಯೋಗಿಸಿಕೊಂಡು ಸಮಸ್ಯೆ ಏನೆಂದು ತೋರಿಸಬೇಕೇ ಹೊರತು ಅದಕ್ಕೆ ಪರಿಹಾರವೇನೆಂದು ಸೂಚಿಸಬಾರದು. ರಾಜಕೀಯ ಮತಾಭಿಪ್ರಾಯದ ಮೇಲೆ ರೂಪುಗೊಂಡ ವ್ಯಂಗ್ಯಚಿತ್ರ ಹಾಸ್ಯದ ಸ್ಥಾನದಲ್ಲಿ ರಾಜಕೀಯ ಮತವನ್ನಷ್ಟೇ ತಂದಿರಿಸುತ್ತದೆ. ರಾಜಕೀಯ ವ್ಯಂಗ್ಯಚಿತ್ರಕಾರರಿಗೆ ಯಾವುದೇ ಬೆಳವಣಿಗೆಯನ್ನು ಸಚಿತ್ರ ವಿಡಂಬನೆಯಲ್ಲಿ ನಿರೂಪಿಸುವ ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಒಂದು ವೃತ್ತಪತ್ರಿಕೆಗೆ ಅದರದೇ ಆದ ನೀತಿಯಿರಬಹುದು. ಆದರೆ, ವ್ಯಂಗ್ಯಚಿತ್ರ ಆ ನೀತಿಗೆ ಬದ್ಧವಾಗಿರಬೇಕಿಲ್ಲ.

ವೃತ್ತಪತ್ರಿಕೆಯಲ್ಲಿ ಒಂದೇ ವಿಷಯವನ್ನು ಕುರಿತು ಅಗ್ರಲೇಖನವೂ ಇರಬಹುದು, ವ್ಯಂಗ್ಯಚಿತ್ರವೂ ಇರಬಹುದು. ಆದರೆ, ಎರಡರ ಅನುಸಂಧಾನ ಮತ್ತು ಒತ್ತು ಬೇರೆ ಬೇರೆಯಾಗಿರುತ್ತದೆ; ಬೇರೆ ಬೇರೆಯಾಗಿರಲೇಬೇಕು. ವ್ಯಂಗ್ಯಚಿತ್ರ ಸಮಸ್ಯೆಗೆ ಯಾವುದೇ ಪರಿಹಾರ ತೋರಿಸದಿದ್ದರೆ, ಅಗ್ರ ಲೇಖನ ಹಿಂದೊಮ್ಮೆ ನೀಡಿದ ಎಚ್ಚರಿಕೆಯನ್ನು ಉಪೇಕ್ಷಿಸಿದವರಿಗೆ ಛೀಮಾರಿ ಹಾಕಿ, ಪರಿಹಾರಮಾರ್ಗವನ್ನೂ ತೋರಿಸೀತು. ವ್ಯಂಗ್ಯಚಿತ್ರ ಆಕ್ಷೇಪಣೆಯನ್ನಷ್ಟೇ ತೋರಿಸುವ ಕನ್ನಡಿಯಾದರೆ, ಅಗ್ರಲೇಖನ ವಿಮರ್ಶಾತ್ಮಕವಾಗಿರುವುದರ ಜೊತೆಗೆ ಸುಧಾರಣೆ ಹೇಗಾಗಬಹುದೆಂಬ ಸೂಚನೆಯನ್ನೂ ಕೊಡಬಲ್ಲುದು. ಹೀಗೆ ವಿಭಿನ್ನ ದೃಷ್ಟಿಕೋನಗಳಿರುವುದರಿಂದಲೇ ವ್ಯಂಗ್ಯಚಿತ್ರ ಮತ್ತು ಅಗ್ರಲೇಖನಗಳ ನಡುವೆ ನೈತಿಕತೆಗೆ ಸಂಬಂಧಿಸಿದ ಯಾವುದೇ ಸಂಬಂಧ ಇರುವುದು ಅಪರೂಪ. ಉಪದೇಶಾತ್ಮಕವಾದ ಒಂದು ಅಗ್ರ ಲೇಖನವನ್ನು ಸಚಿತ್ರಗೊಳಿಸುವುದಷ್ಟೇ ವ್ಯಂಗ್ಯಚಿತ್ರದ ಉದ್ದೇಶವಾದರೆ ಅದು ವಿಡಂಬನೆಯ ಒಂದು



ವಾಹಕವಾಗಿ ಸೋಲುವುದಂತೂ ಶತಸ್ಸಿದ್ಧ.

ವ್ಯಂಗ್ಯಚಿತ್ರದ ಉದ್ದೇಶ ನೋಡುಗನಿಗೆ ಮುದ ನೀಡುವುದಕ್ಕೆ ಮಾತ್ರ ಸೀಮಿತವೆ? ಒಂದು ವ್ಯಂಗ್ಯಚಿತ್ರವನ್ನು ಬಗೆಯುವ ಓದುಗನ ಮನಃಸ್ಥಿತಿಯಲ್ಲೇ ಇದಕ್ಕೆ ಉತ್ತರವಿರುತ್ತದೆಯೆಂದು ನಾನು ಹೇಳುತ್ತೇನೆ. ಉದಾಹರಣೆಗೆ, ನಾವು ಸಾಮಾಜಿಕ ಅಥವಾ ರಾಜಕೀಯ ವ್ಯಾಧಿಯೊಂದನ್ನು ಒಬ್ಬ ವ್ಯಕ್ತಿಯ ಅಂಗೈ ಹುಣ್ಣಿಗೆ ಹೋಲಿಸಿದರೆ, ಅವನು ಅದನ್ನು ನೋಡಿ ಸಂತೋಷಪಡಬಹುದೆ? ಯಾರಲ್ಲಿ ಆಳವಾದ ಹಾಸ್ಯಪ್ರಜ್ಞೆ ಇರುತ್ತದೋ ಅವನು ಮಾತ್ರ ಅಂಗೈ ಹುಣ್ಣಿನಂಥ ವೇದನೆಯನ್ನು ಕಂಡು ಸಂತೋಷಿಸಬಲ್ಲ. ರಾಜಕೀಯ ವ್ಯಂಗ್ಯಚಿತ್ರದ ಜೀವಾಳವೇ ಆಗಿರುವ ತೀರ ಲಘುವಾದ ರಾಜಕೀಯ